# ರಾಜು ಬಿಟ್ಟುಹೋದ ಕಚಗುಳಿಯ ನೆನಪು

■ ವಿಶಾಖ ಎನ್.



ಕಾನ್ಪುರದ ಕವಿ ರಮೇಶ್ ಶ್ರೀವಾಸ್ತವ್. ಅವರ ಮಗ ಸತ್ಯಪ್ರಕಾಶ್ ಶ್ರೀವಾಸ್ತವ್. ರಮೇಶ್ ಕಾವ್ಯದಲ್ಲಿ ಹಾಸ್ಯ ಬೆರೆತಿರುತ್ತಿತ್ತು. ಸತ್ಯಪ್ರಕಾಶ್, ಅಮಿತಾಭ್ ಬಚ್ಚನ್ ಅಭಿಮಾನಿ. ಅನೇಕರಂತೆ ಅವರೂ ಬಚ್ಚನ್ ಕಂಠವನ್ನು ಅನುಕರಿಸಿ ಡೈಲಾಗ್ ಹೊಡೆಯುತ್ತಿದ್ದರು. ಅನೇಕ ಕಲಾವಿದರ ಡೈಲಾಗ್‌ಬಾಜಿಯನ್ನು ಮಿಮಿಕ್ರಿ ಮಾಡಿ ರಂಜಿಸುತ್ತಿದ್ದರು. ತಂದೆಗೆ ಇದ್ದಂತಹ ಕವಿಹೃದಯ ಅವರಿಗೂ ಇತ್ತು. ಆದರೆ ಅದರ ಮಿಡಿತ ಕಾವ್ಯದ ಹಳೆಯ ದಾರಿಯಲ್ಲಿ ನಡೆಸಲಿಲ್ಲ, ಹಾಸ್ಯದ ರಹದಾರಿಯಲ್ಲಿ ನಡೆಯುವಂತೆ ಮಾಡಿತು. ಮೊನ್ನೆ ಅವರು ಎಲ್ಲರನ್ನೂ ಬಿಟ್ಟು ಅಗಲಿದಾಗ, ಅವರು ಉಳಿಸಿಹೋದ ಅನೇಕ ಹಾಸ್ಯಪ್ರಸಂಗಗಳನ್ನು ಜನರು ಮೆಲುಕುಹಾಕಿದರು.

ಸತ್ಯಪ್ರಕಾಶ್ ಜನರಿಗೆ ಪರಿಚಿತವಾದದ್ದು ರಾಜು ಶ್ರೀವಾಸ್ತವ್ ಎನ್ನುವ ಹೆಸರಿನ ಮೂಲಕ. 2014ರಲ್ಲಿ ದೇಶದಲ್ಲಿ ನರೇಂದ್ರ ಮೋದಿ ಹವಾ ಏಳತೊಡಗಿದಾಗ ಬಿಜೆಪಿಗೆ ಸೇರಿದ ಅವರು, ಪ್ರಚಾರ ಕಾರ್ಯಕ್ರಮಗಳಲ್ಲೆಲ್ಲ ತೊಡಗಿಕೊಂಡರು. ಅದರ ಪರಿಣಾಮವೆನ್ನುವಂತೆ ಅವರು ಅಗಲಿದಾಗ ರಾಜಕಾರಣಿಗಳನೇಕರು ಸಂತಾಪ ವ್ಯಕ್ತಪಡಿಸಿದರು.

ರಾಜು ಹಾಸ್ಯವನ್ನೇ ನೆಚ್ಚಿಕೊಂಡು ಬದುಕಿನುದ್ದಕ್ಕೂ ಹೆಣಗಾಡಿದ ಎಷ್ಟೋ ಮಂದಿಯಲ್ಲಿ ಒಬ್ಬರೆನ್ನುವುದೂ ಸತ್ಯ. ಹಾಸ್ಯವೇ ಅವರನ್ನು ಸಲಹಿತೆನ್ನುವುದೂ ತಥ್ಯ.

1980ರಲ್ಲಿ ಸತ್ಯಪ್ರಕಾಶ್ ಕನಸುಗಳ ಮೂಟೆ ಕಟ್ಟಿಕೊಂಡು ಮುಂಬೈ ಗಲ್ಲಿಯಲ್ಲಿ ಇಳಿದದ್ದು ಸಿನಿಮೀಯವಾಗಿಯೇ. ಆಮೇಲೆ ಸಣ್ಣಪುಟ್ಟ ಪಾತ್ರಗಳಲ್ಲಿ ಅಭಿನಯಿಸುವ ಅವಕಾಶಗಳೂ ಸಿಕ್ಕವು. ‘ತೇಜಾಬ್’, ‘ಮೈನೆ ಪ್ಯಾರ್ ಕಿಯಾ’, ‘ಬಾಜಿಗರ್’, ‘ಮೈ ಪ್ರೇಮ್ ಕಿ ದೀವಾನಿ ಹೂಂ’, ‘ಬಾಂಬೆ ಟು ಗೋವಾ’, ‘ಟಾಯ್ಲೆಟ್–ಏಕ್ ಪ್ರೇಮ್ ಕಥಾ’ ಈ ಚಿತ್ರಗಳಲ್ಲಿ ಅವರು ಯಾವ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರೆನ್ನುವುದು ಹೆಚ್ಚು ಜನರಿಗೆ ನೆನಪಿರಲಿಕ್ಕಿಲ್ಲ. ಆದರೆ, ಸ್ಟ್ಯಾಂಡ್ ಅಪ್ ಕಾಮಿಡಿಯನ್ ಆಗಿ ಅವರು ಹಾರಿಸಿದ ಚಟಾಕಿಗಳು ಸ್ಮೃತಿಪಟಲದಲ್ಲಿ ಉಳಿದಿವೆ. ಬಿಜೆಪಿ ಈ ಹೊತ್ತಿನಲ್ಲಿ ಡಿಜಿಟಲ್ ಮಾಧ್ಯಮಗಳನ್ನು ಎಷ್ಟು ವ್ಯವಸ್ಥಿತವಾಗಿ ಎಲ್ಲದಕ್ಕೂ ಉಪಯೋಗಿಸಿಕೊಳ್ಳುತ್ತಿದೆ. ಅದೇ ಪಕ್ಷದಲ್ಲಿದ್ದೂ ರಾಜು ಶ್ರೀವಾಸ್ತವ್ ಮಾಡಿದ್ದ ಜೋಕ್ ಒಂದು ವ್ಯವಸ್ಥೆಯ ವ್ಯಂಗ್ಯಕ್ಕೆ ಕನ್ನಡಿ ಹಿಡಿಯುವಂತಿದೆ. ಆ ಜೋಕ್ ಹೀಗಿದೆ:

ಗಜೋದರನು ಮಂತ್ರಿಗಳ ಬಳಿಗೆ ಹೋದನು.

ಮಂತ್ರಿ: ಏನಯ್ಯಾ ಗಜೋದರ, ಇಷ್ಟು ದೂರ ಬಂದಿರುವೆ?

ಗಜೋದರ: ಸ್ವಾಮಿ, ಮಳೆಯೇ ಆಗುತ್ತಿಲ್ಲ. ನೀವು ಏನಾದರೂ ಮಾಡಬೇಕು.

ಮಂತ್ರಿ: ಮಳೆ ಬಾರದೇ ಇದ್ದರೆ ನಾನು ಏನು ಮಾಡಲು ಸಾಧ್ಯವಯ್ಯಾ?

ಗಜೋದರ: ಈಗ ಎಲ್ಲವೂ ಕಂಪ್ಯೂಟರ್‌ನಲ್ಲೇ ಆಗ್ತದಂತಲ್ಲ...

ಮಂತ್ರಿ: ಅದಕ್ಕೂ ಮಳೆಗೂ ಏನಯ್ಯಾ ಸಂಬಂಧ?

ಗಜೋದರ: ಆ ಕಂಪ್ಯೂಟರ್‌ನಿಂದಲೇ ಸ್ವಲ್ಪ ಮಳೆಯನ್ನು ಡೌನ್‌ಲೋಡ್ ಮಾಡಿ, ನಮ್ಮತ್ತ ಹರಿಬಿಡಿ ಸ್ವಾಮಿ...

ರಾಜು ಶ್ರೀವಾಸ್ತವ್ ಅಸಿಡಿಟಿಯನ್ನು ಹೋಗಲಾಡಿಸುವ ಆಯುರ್ವೇದದ ಉತ್ಪನ್ನವೊಂದರ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದರು. ಈಗಲೂ ಆ ಜಾಹೀರಾತು ಕೆಲವು ಚಿತ್ರಮಂದಿರಗಳ ಪರದೆಗಳ ಮೇಲೆ ಕಾಣುತ್ತಿರುತ್ತದೆ. ಆ ಜಾಹೀರಾತಿನಲ್ಲಿ ಅವರು ಅಸಿಡಿಟಿ ಆದಾಗ ಮುಖವನ್ನು ಕಿವುಚುತ್ತಾರೆ. ಅವರು ಆಗಸ್ಟ್‌ನಲ್ಲಿ ದಿಢೀರನೆ ಕುಸಿಯುವ ಮೊದಲೂ ಮುಖಭಾವ ಹಾಗೆಯೇ ಆಗಿತ್ತೆಂದು ಆಪ್ತೇಷ್ಟರು ಹೇಳಿಕೊಂಡಿದ್ದರು. ಜಿಮ್‌ನಲ್ಲಿ ಟ್ರೆಡ್‌ಮಿಲ್ ಮಾಡಿದ್ದೇ ಕುಸಿದಿದ್ದ ಅವರು, ಆಮೇಲೆ ನಲವತ್ತಕ್ಕೂ ಹೆಚ್ಚು ದಿನ ಆಸ್ಪತ್ರೆಯಲ್ಲಿ ಹೋರಾಡಿದರು. ಎರಡು ಸಲ ಜೀವಾನಿಲ ಪೂರೈಸುವ ಯಂತ್ರದ ಮೊರೆಹೋಗಬೇಕಾಯಿತು. ಕೊನೆಗೂ ಉಳಿಯಲಿಲ್ಲ.

‘ದಿ ಗ್ರೇಟ್ ಇಂಡಿಯನ್ ಲಾಫ್ಟರ್ ಚಾಲೆಂಜ್’ನಲ್ಲಿ ಒಮ್ಮೆ ರನ್ನರ್ ಅಪ್ ಆಗಿದ್ದ ಅವರು, ಅದೇ ಹೆಸರಿನ ಕಾರ್ಯಕ್ರಮದ ಚಾಂಪಿಯನ್‌ಷಿಪ್‌ನಲ್ಲಿ ವಿಜೇತರಾಗಿ ಮಿಂಚಿದ್ದರು. ಸ್ಟ್ಯಾಂಡ್ ಅಪ್ ಕಾಮಿಡಿ ಎನ್ನುವುದು ಭಾರತದ ಮಟ್ಟಿಗೆ ಅಂಬೆಗಾಲಿಕ್ಕುತ್ತಿದ್ದ ಕಾಲಘಟ್ಟದಲ್ಲಿ ಅವರಿಟ್ಟ ಕಚಗುಳಿಯನ್ನಂತೂ ಯಾರೂ ಮರೆಯಲಾರರು. ‘ಗಜೋದರ’ ಎಂದು ಅವರು ಸೃಷ್ಟಿಸಿದ್ದ ಪಾತ್ರ ಈಗಲೂ ಪದೇಪದೇ ನಗು ತರಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in